


ಚಿತ್ರ : ೫೬




ಚಿತ್ರ : ೫೭

ಅದೊಂದು ತೀರ್ಥಕ್ಷೇತ್ರವೇ ಆಗಿಬಿಟ್ಟಿತ್ತು. ಅನಂತರ ಈ ಬಂಗಲೆಗೆ 'ವಿವೇಕಾನಂದ ಲಾಡ್ಜ್' ಎಂದೇ ಹೆಸರಾಯಿತು. ಈ ಸಂದರ್ಶಕರಲ್ಲಿ ಸರ್ಕಾರದ ಉನ್ನತ ಅಧಿಕಾರಿಗಳಿಂದ ಹಿಡಿದು, ಸಮಾಜದ ಅತ್ಯಂತ ಕೆಳ ವರ್ಗದವರಿಗೆ ಎಲ್ಲ ಬಗೆಯ ಜನರೂ ಸೇರಿದ್ದರು. ಅಧ್ಯಾತ್ಮಪ್ರಧಾನವಾದ ಹಿಂದೂ ಸಮಾಜವು ಸಂನ್ಯಾಸಿಯೋರ್ವನಿಗೆ ಸಲ್ಲಿಸಿದ ಭಕ್ತಿಗೌರವಗಳನ್ನು ಕಣ್ಣಾರೆ ಕಂಡ ಸ್ವಾಮೀಜಿಯವರ ಪಾಶ್ಚಾತ್ಯ ಶಿಷ್ಯರು, ಆಶ್ಚರ್ಯಚಕಿತರಾದರು.

### ಛಾಯಾಚಿತ್ರ ೫೮

೧೮೯೭ ರ ಜನವರಿಯಲ್ಲಿ ಖ್ಯಾತ ಛಾಯಾಗ್ರಾಹಕರಾದ ಶ್ರೀ ಅಪ್ಪಾವನ್ ಮುದಲಿಯಾರ್ ಅವರು ಶ್ರೀಲಂಕಾದ ಜಾಫ್ನಾದಲ್ಲಿ ಈ ಚಿತ್ರವನ್ನು ಸೆರೆಹಿಡಿದರು. ಮುದಲಿಯಾರ್ ಚೆನ್ನೈ ನಗರದವರು; ಒಬ್ಬ ದೈವಭಕ್ತರು ಕೂಡ. ರಾಮಕೃಷ್ಣ ಮಹಾಸಂಘದ 'ಪ್ರಬುದ್ಧಭಾರತ' ಆಂಗ್ಲ ಮಾಸಪತ್ರಿಕೆಯ ಏಪ್ರಿಲ್ ೧೮೯೭ರ ಪ್ರತಿಯೊಂದಿಗೆ ಈ ಚಿತ್ರದ ಪ್ರತಿಯೊಂದನ್ನೂ ಕಳಿಸುವ ವ್ಯವಸ್ಥೆಯನ್ನು ಮಾಡಲಾಗಿತ್ತು. ಭಾರತೀಯ ಸಂನ್ಯಾಸಿಯ ಸಾಂಪ್ರದಾಯಿಕ ವೇಷದಲ್ಲಿ ಸ್ವಾಮೀಜಿ ಇಲ್ಲಿ ವಿರಾಜಮಾನರಾಗಿದ್ದಾರೆ.



ಚಿತ್ರ : ೫೮

**ಏಳಿ, ಎದ್ದೇಳಿ, ಇನ್ನು ನಿದ್ರಿಸದಿರಿ. ಎಲ್ಲ ಬಯಕೆಗಳನ್ನೂ ಪೂರೈಸಿಕೊಳ್ಳುವ, ಎಲ್ಲ ಕಷ್ಟಗಳನ್ನೂ ನಿವಾರಣೆ ಮಾಡುವ ಶಕ್ತಿಯು ನಿಮ್ಮಲ್ಲಿ ಪ್ರತಿಯೊಬ್ಬರಲ್ಲೂ ಇದೆ. ಇದನ್ನು ನಂಬಿ. ಆಗ ಆ ಶಕ್ತಿಯು ಪ್ರಕಟಗೊಳ್ಳುವುದು. – ಸ್ವಾಮಿ ವಿವೇಕಾನಂದ**